ಅಧ್ಯಕ್ಷರು:– ಆಯಿತು, do not repeat.

ಶ್ರೀ ಕೆ.ಬಿ. ಕೋಳಿವಾಡ:– ಪ್ರತಿಯೊಬ್ಬ ಶಾಸಕರಿಗೂ ವಿವರ ಕಳುಹಿಸಿದ್ದೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಇವತ್ತಿನ ಪ್ರಶ್ನೆ ಬಗ್ಗೆ ನಾನು ಕೇಳುತ್ತಿರುವುದು. ಆಮೇಲೆ ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ ಅಂದರೆ ಯಾವ ಯೋಜನೆಗಳನ್ನೂ ಅವರು ನಿರ್ದಿಷ್ಟವಾಗಿ ಹೇಳಿಲ್ಲ. ಇವತ್ತು fluoride ನೀರು ಕುಡಿಯುವುದರಿಂದ ಏನಾಗಿದೆ ಅಂದರೆ ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳು ಏನು ಕ್ರಮ ಕೈಗೊಂಡಿವೆ ಎಂಬುದನ್ನು ಹೇಳಿಲ್ಲ.

ಶ್ರೀ ಕೆ.ಬಿ. ಕೋಳೀವಾಡ:– ಶುದ್ಧ ಕುಡಿಯುವ ನೀರು ಕೊಡುವುದಕ್ಕೆಂದು Rajiv Gandhi Sub-Mission Scheme ಎಂದು special ಆಗಿ ಈ defected water ಮಾಡುವ ಸಲುವಾಗಿಯೇ ಇದೆ.

ಇದರಲ್ಲಿ 99 ಸ್ಕೀಮ್‌ಗಳನ್ನು ನಾವು ಈಗಾಗಲೇ ತಯಾರು ಮಾಡಿದ್ದೇವೆ, ಅದರಲ್ಲಿ ನಾವು 47 ಸ್ಕೀಮ್‌ಗಳನ್ನು ಈಗಾಗಲೇ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭವಾಗಿದೆ, ನಡೆದಿದೆ. 9 ಸ್ಕೀಮ್‌ಗಳು ಕಂಪ್ಲೀಟ್ ಆಗಿವೆ. ಇನ್ನು 36 ಸ್ಕೀಮ್‌ಗಳು ವಿವಿಧ ಹಂತದಲ್ಲಿವೆ. ಇಷ್ಟೆಲ್ಲಾ ಮಾಡುವುದಕ್ಕೆ ನಮಗೆ ಖರ್ಚಾಗಿರುವುದು 61 ಕೋಟಿ 98 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಎಲ್ಲಾ ಗ್ರಾಮಗಳಿಗೂ ಹಂತ ಹಂತವಾಗಿ ಆರ್ಥಿಕ ಲಭ್ಯತೆಗನುಗುಣವಾಗಿ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳು

377(3392): ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಇರುವ ಎ.ಎನ್.ಎಂ. ಮತ್ತು ಸ್ಟಾಫ್ ನರ್ಸ್ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಖಾಲಿ ಹುದ್ದೆಗಳಿಂದ ಆಸ್ಪತ್ರೆಯ ಕೆಲಸಗಳಿಗೆ ತೊಂದರೆಯಾಗಿರುವುದಿಲ್ಲವೇ;

ಇ) ಸದರಿ ಖಾಲಿ ಹುದ್ದೆಗಳನ್ನು ಸರ್ಕಾರವು ಯಾವಾಗ ಭರ್ತಿ ಮಾಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ 1 ಎ.ಎನ್.ಎಂ. ಮತ್ತು 3 ಸ್ಟಾಫ್ ನರ್ಸ್ ಹುದ್ದೆಗಳು ಖಾಲಿ ಇರುತ್ತವೆ.

ಆ) ಆಸ್ಪತ್ರೆಯ ದೈನಂದಿನ ಕಾರ್ಯಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ದೈನಂದಿನ ಕರ್ತವ್ಯ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಖಾಲಿ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ ನೇಮಕ ಮಾಡುವ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಸುಮಾರು 10 ರಿಂದ 15 ವರ್ಷ ಅಲ್ಲೇ ಕೆಲಸ ಮಾಡುತ್ತಿರುವ ಎಎನ್‌ಎಂಗಳು ಮತ್ತು ಸ್ಟಾಫ್ ನರ್ಸ್‌ಗಳಿದ್ದಾರೆ.

ಇವರುಗಳು ಏನಾಗಿದ್ದಾರೆಂದರೆ ನಮ್ಮಲ್ಲಿ 'ಹಳೆಯ ರೋಗಿಗಳಿಗೆ ಹೊಸ ಡಾಕ್ಟರ್' ಎನ್ನುತಕ್ಕ ರೀತಿಯಾಗಿದೆ. ಅಲ್ಲಿ ಬಹಳಷ್ಟು ಜನರು ಇರುವುದರಿಂದ ಅಲ್ಲಿರತಕ್ಕ ಡಾಕ್ಟರ್‌ಗಳನ್ನೂ ಕೂಡ ದಾರಿ ತಪ್ಪಿಸತಕ್ಕ ಹಲವಾರು ಸಂದರ್ಭಗಳನ್ನು ನಾವು ನೋಡಿದ್ದೇವೆ. ಆ ಕಾರಣಕ್ಕಾಗಿ ನಮ್ಮ ಜಿಲ್ಲಾ ಆಸ್ಪತ್ರೆಯ ಸಲಹಾ ಸಮಿತಿಯಲ್ಲೂ ಕೂಡ ಅಂಥವರನ್ನು ಕರೆಸಿ ಸಲಹೆ ಸೂಚನೆಗಳನ್ನು ಕೊಟ್ಟರೂ ಕೂಡ ಅವರ ಸ್ವಭಾವವನ್ನು ಇಲ್ಲಿಯವರೆಗೂ ಅವರುಗಳು ತಿದ್ದಿಕೊಂಡಿಲ್ಲ. ಆ ಕಾರಣಕ್ಕಾಗಿ ಯಾರ್ಯಾರು ಐದು ವರ್ಷದ ಮೇಲ್ಪಟ್ಟು ಇದ್ದಾರೆ, ಇಂಥವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ತಮ್ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲೂ ಕೂಡ ಸಾಕಷ್ಟು.....

ಅಧ್ಯಕ್ಷರು:– ಜಿಲ್ಲಾ ಆಸ್ಪತ್ರೆ ಬಗ್ಗೆ ತಾವು ಕೇಳಿರುವುದು. ಗ್ರಾಮಾಂತರ ಪ್ರದೇಶದ್ದು ಕೇಳಿದರೆ ಉತ್ತರ ಎಲ್ಲಿದೆ? ಜಿಲ್ಲಾ ಆಸ್ಪತ್ರೆ ಬಗ್ಗೆ ದಯವಿಟ್ಟು ಪ್ರಶ್ನೆ ಕೇಳಿ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ:– ಅದರ ಬಗ್ಗೆ ಕೂಡ ಕೇಳುವುದಕ್ಕೆ ಒಂದು ಅವಕಾಶವನ್ನು ಕೊಡಿ.

ಅಧ್ಯಕ್ಷರು:– ಅವರು ಉತ್ತರ ರೆಡಿಮಾಡಬೇಕಾಗುತ್ತದೆ. ನೀವು ಮೊದಲೇ ಕೇಳಿಬಿಡಬೇಕಾಗಿತ್ತು. ಮೊದಲೇ ಪ್ರಶ್ನೆ ಕಳುಹಿಸುವಾಗಲೇ ಕೇಳಬೇಕಾಗಿತ್ತು.

ಶ್ರೀ ಕಾಗೋಡು ತಿಮ್ಮಪ್ಪ:– ಮಾನ್ಯ ಅಧ್ಯಕ್ಷರೇ, ಅವರು ಕೇಳುವ ಪ್ರಶ್ನೆಯೇ ಬೇರೆ. ಉಪ ಪ್ರಶ್ನೆ ಕೇಳುವುದೇ ಬೇರೆ. ಆದರೂ ಕೂಡ ಅವರು ಕೇಳಿರುವುದಕ್ಕೆ ಬರೆದು ಕಳುಹಿಸಿ ಎಲ್ಲಿ ಅಂಥದ್ದು ಇದೆ, ಸರಿಪಡಿಸೋಣ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ:– ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಎಎನ್‌ಎಂ ಗಳ ಕೊರತೆ ಇದೆ. ಅದರ ಜೊತೆಗೆ ಕ್ವಾರ್ಟರ್ಸ್ ಇಲ್ಲ ಎಂಬ ಕಾರಣ ಹೇಳಿ ಸಾಕಷ್ಟು ಎಎನ್‌ಎಂ ಗಳು ಪಟ್ಟಣದಲ್ಲಿರುತ್ತಾರೆ. ಆ ಕ್ವಾರ್ಟರ್ಸ್‌ಗಳನ್ನು ಕೊಡುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ?

ಅಧ್ಯಕ್ಷರು:– ಕ್ವಾರ್ಟರ್ಸ್ ಬಗ್ಗೆ ಅವರಿಗೆ ಉತ್ತರ ತಿಳಿದಿರುವುದೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ಮಾನ್ಯ ಅಧ್ಯಕ್ಷರೇ, ಎಲ್ಲಿ ಸರ್ಕಾರದ ಕ್ವಾರ್ಟರ್ಸ್ ಇದೆ, ಅವರು ಅಲ್ಲಿ ಖಾಯಂ ಆಗಿ ಇರಲೇಬೇಕು. ಕ್ವಾರ್ಟರ್ಸ್ ಕಟ್ಟುವಂತಹ ವಿಚಾರ ಜಿಲ್ಲಾ ಪಂಚಾಯಿತಿಯವರು ಅದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ಅದರ ಜೊತೆಗೆ ಇತ್ತೀಚೆಗೆ ಒಂದು ಹೆಚ್‌ಎನ್‌ಪಿ ಕಾರ್ಯಕ್ರಮ ಎಂದು ಹೇಳಿ ವಿಶ್ವಬ್ಯಾಂಕ್‌ನಿಂದ ಕೇಳಿದ್ದಾರೆ. ಅದರಲ್ಲಿ ಈ ಎಎನ್‌ಎಂ ಕ್ವಾರ್ಟರ್ಸ್‌ಗಳನ್ನು ಕಟ್ಟುವುದಕ್ಕೆ ಪ್ರಾವಿಷನನ್ನು ಮಾಡಿಕೊಂಡಿದ್ದೇವೆ. ಅವರು ಹೇಳುವಂಥ ಸಮಸ್ಯೆಗಳನ್ನು ಅದರಲ್ಲಿ ಅಳವಡಿಸುತ್ತೇವೆ.

ಕೊಡಗು ಜಿಲ್ಲೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಬಿಡುಗಡೆಯಾದ ಹಣ

338(2888): ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಗೆ 2000–2001, 2001–2002 ಮತ್ತು 2002–2003ರ ಹಣಕಾಸು ಸಾಲಿನಲ್ಲಿ ಎಷ್ಟು ಹಣ ಮೀಸಲಿಡಲಾಗಿತ್ತು;

ಆ) ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;